ಮೂಲ ದಾವಾ ಸಂಖ್ಯೆ. 25/2019 ಪಿ ಡಬ್ಲ್ಯೂ 1

(ದಿನಾಂಕ 07-02-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ 1, 2 ನೇ ಪ್ರತಿವಾದಿ ಪರ ಶ್ರೀ ಎಸ್ ಎಲ್ ಜಿ ವಕೀಲರಿಂದಃ-

ಈ ದಾವೆಯನ್ನು ನಾನು ನನ್ನ ತಂದೆ, ತಾಯಿ, ನನ್ನ ತಂಗಿ ಮತ್ತು ಜಮೀನು ಖರೀದಿಸಿದವರ ಮೇಲೆ ಭಾಗಕ್ಕಾಗಿ ದಾಖಲಿಸಿದ್ದೇನೆ. ನನ್ನ ವಿವಾಹವಾಗಿ ಈಗ ನನ್ನ ಗಂಡನ ಮನೆಯಲ್ಲಿ ವಾಸವಾಗಿದ್ದೇನೆಂದರೆ ಸರಿ. ನನ್ನ ತಂಗಿ 2 ನೇ ಪ್ರತಿವಾದಿ ವಿವಾಹವಾಗಿ ಅವರ ಗಂಡನ ಮನೆಯಲ್ಲಿ ವಾಸವಾಗಿದ್ದಾರೆಂದರೆ ಸರಿ. ವಟ್ಟಮ್ಮನಹಳ್ಳಿ ಗ್ರಾಮದಲ್ಲಿ ನನ್ನ ತಂದೆ ಮತ್ತು ತಾಯಿ ಜೀವನ ಮಾಡುತ್ತಾರೆಂದರೆ ಸರಿ, ನನ್ನ ತಂದೆ ನಮ್ಮ ಕುಟುಂಬಕ್ಕೆ ಯಜಮಾನವರು ಎಂದರೆ ಸರಿ. ನನ್ನ ತಂದೆಗೆ ಪಾರ್ಶ್ವವಾಯು ಖಾಯಿಲೆಯಾಗಿತ್ತು ಎಂದರೆ ಸರಿ. ಅದರ ಚಿಕಿತ್ಸೆಯನ್ನು ಅವರು ಸಾಲಮಾಡಿ ಮಾಡಿಸಿಕೊಂಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಗೆ ವಯಸ್ಸಾಗಿದ್ದರಿಂದ ಅವರಿಗೆ ಆದಾಯ ಇರಲಿಲ್ಲವೆಂದರೆ ಸರಿಯಲ್ಲ. ನನ್ನ ತಂದೆಯವರು ದಾವಾ 1 ನೇ ಆಸ್ತಿಯನ್ನು 4 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆಂದರೆ ಸರಿ. ಸದರಿ ಹಣವನ್ನು ಅವರು ತನ್ನ ಕುಟುಂಬದ ನಿರ್ವಹಣೆ ಮತ್ತು ವೈದ್ಯಕೀಯ ಖರ್ಚು ಹಾಗೂ ಚಿಲ್ಲರೆ ಸಾಲ ತೀರಿಸಲು ಖರ್ಚು ಮಾಡಿರುತ್ತಾರೆಂದರೆ ಸರಿಯಲ್ಲ. ನಾನು ಮತ್ತು ನನ್ನ ಸಹೋದರಿ 2 ನೇ ಪ್ರತಿವಾದಿ ನಮ್ಮ ತಂದೆಯ ಬಳಿ ಆಸ್ತಿಯಲ್ಲಿ ಭಾಗವನ್ನು ಕೇಳಿದ್ದೆವು ಎಂದರೆ ಸರಿ. ಆಗ ನನ್ನ ತಂದೆ ದಾವಾ ಐಟಂ ನಂ.8 ಮತ್ತು ಐಟಂ ನಂ.3 ನ್ನು ನನ್ನ ಹೆಸರಿಗೆ ನೊಂದಾಯಿತ ದಾನಪತ್ರದ ಮೂಲಕ ಕೊಟ್ಟಿರುತ್ತಾರೆಂದರೆ ಸರಿ. ದಾವಾ 2 ಮತ್ತು 4 ರಿಂದ 7 ಸ್ವತ್ತುಗಳನ್ನು ನಮ್ಮ ತಂದೆಯವರು 2 ನೇ ಪ್ರತಿವಾದಿಗೆ ನೊಂದಾಯಿತ ದಾನಪತ್ರದ ಮೂಲಕ ಕೊಟ್ಟಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಉಳಿದ ಆಸ್ತಿಗಳನ್ನು ಮತ್ತು ಮನೆಯನ್ನು ನನ್ನ ತಂದೆ ಮತ್ತು ತಾಯಿ ತಮ್ಮ ಜೀವನೋಪಾಯಕ್ಕೆ ಇಟ್ಟುಕೊಂಡಿರುತ್ತಾರೆಂದರೆ ಸರಿ. ನಮ್ಮ ತಂದೆ ಜೀವಂತ ಇದ್ದಾಗ ತಮ್ಮ ಆಸ್ತಿಗಳನ್ನು ನಮ್ಮ ಮತ್ತು ಅವರ ನಡುವೆ ವ್ಯವಸ್ಥೆಯನ್ನು ಮಾಡಿದರು ಎಂದರೆ ಸರಿ. ದಾವಾಸ್ತಿ ಐಟಂ ನಂ. 9 ಸರ್ವೆ ನಂ.126 ಎ/1, 2 ಎಕರೆ 37 ಸೆಂಟ್ಸ ಜಮೀನು ಯಾರ ಹೆಸರಿನಲ್ಲಿದೆ ಎಂದರೆ ಸಾಕ್ಷಿಯು ಹೊಲದ ಹೆಸರು ಹೇಳಬೇಕೆನ್ನುತ್ತಾರೆ. ನನ್ನ ವಾದಪತ್ರದಲಿಲ ನಾನು ಹೊಲದ ಹೆಸರನ್ನು ಬರೆಸಿರುವುದಿಲ್ಲ.

ನನ್ನ ತಂದೆಗೆ 2 ಜನ ಸಹೋದರರು ಅವರೆಂದರೆ ಬುಳ್ಳನಗೌಡ ಮತ್ತು ಈರನಗೌಡ ಇರುತ್ತಾರೆ. ದಾವಾ 9 ನೇ ಆಸ್ತಿ ನಮ್ಮ ತಂದೆಗೆ ಬಂದಿರುತ್ತದೆ. ಸರ್ವೆ ನಂ.439 ಡಿ, 2 ಎಕರೆ 12

ಗುಂಟೆ ಜಮೀನು ನನ್ನ ಹೆಸರಿನಲ್ಲಿದೆ. ಸದರಿ ಜಮೀನಿನಲ್ಲಿ ನನ್ನ ತಂದೆ ಮತ್ತು ಸಹೋದರರು 3 ಜನರಿಗೆ ತಲಾ 70 ಸೆಂಟ್ಸ ಜಮೀನು ಬರುತ್ತದೆಂದರೆ ಸರಿ. ನಮಗೆ ಸದರಿ ಜಮೀನಿನಲ್ಲಿ ಮಾತ್ರ 70 ಸೆಂಟ್ಸ ಹಕ್ಕು ಇದ್ದು ಸಂಪೂರ್ಣ 2.12 ಎಕರೆ ಜಮೀನಿನಲ್ಲಿ ಹಕ್ಕು ಇರುವುದಿಲ್ಲವೆಂದರೆ ಸರಿ.

ನನ್ನ ತಂದೆ ನನಗೆ ದಾನಪತ್ರದ ಮೂಲಕ ನೀಡಿದ ಜಮೀನಿನಲ್ಲಿ ನಾನು ವಿ ಎಸ್ ಎಸ್ ಎನ್ ಬ್ಯಾಂಕ್ ವರ್ಲಹಳ್ಳಿಯಲ್ಲಿ ಸಾಲ ಪಡೆದಿದ್ದೇನೆಂದರೆ ಸರಿ. ನನ್ನ ತಂದೆಯವರು ನನಗೆ ನೀಡಿದಂತಹ ಒಟ್ಟು 4.49 ಎಕರೆ ಜಮೀನಿನಲ್ಲಿ ನಾನೇ ಸ್ವಾಧೀನದಲ್ಲಿರುತ್ತೇನೆಂದರೆ ಸರಿ. ನನ್ನ ತಂದೆ ನನ್ನ ಸಹೋದರಿ 2 ನೇ ಪ್ರತಿವಾದಿಗೆ ನೀಡಿದ ಆಸ್ತಿಯಲ್ಲಿ ಅವಳೇ ಸ್ವಾಧೀನದಲ್ಲಿರುತ್ತಾಳೆಂದರೆ ಸರಿ. ನನ್ನ ತಂದೆಯವರು ಸರ್ವೆ ನಂ.445/4 ಮತ್ತು 126 ಎ/1 ಜಮೀನನ್ನು ಉಳಿಸಿಕೊಂಡಿರುತ್ತಾರೆಂದರೆ ಸರಿ. ಮನೆ ನಮ್ಮ ತಂದೆಯವರಿಗೆ ಬಂದಿದೆ ಅವರು ಆ ಮನೆಯಲ್ಲಿ ವಾಸವಾಗಿದ್ದಾರೆಂದರೆ ಸರಿ. ಸರ್ವೆ ನಂ.126 ಎ/1 ರಲ್ಲಿ ತನಗೆ ಭಾಗ ಕೊಡಬೇಕು ಅಂತಾ ನನ್ನ ತಂದೆ 3 ನೇ ಪ್ರತಿವಾದಿಗೆ ಕೇಳಿದ್ದು 3 ನೇ ಪ್ರತಿವಾದಿಯು ಅವನ ಮೇಲೆ ಹಲ್ಲೆ ಮಾಡಿರುತ್ತಾನೆ ಆ ಬಗ್ಗೆ ಅವನ ಮೇಲೆ ಎಫ್ ಐ ಆರ್ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಂದೆಯವರು ಜೀವಂತ ಇದ್ದಾಗಲೇ ಕುಟುಂಬದ ಆಸ್ತಿಗಳನ್ನು ಹಂಚಿಕೆ ಮಾಡಿರುತ್ತಾರೆಂದರೆ ಸರಿಯಲ್ಲ. ನನ್ನ ತಾಯಿಯವರು ವಟ್ಟಮ್ಮನಹಳ್ಳಿ ಗ್ರಾಮದಲ್ಲಿ ಒಬ್ಬರೇ ವಾಸವಾಗಿರುತ್ತಾರೆ. ನನ್ನ ತಾಯಿಗೆ ಕ್ಯಾನ್ಸರ್ ಖಾಯಿಲೆ ಇದೆ ಎಂದರೆ ನನಗೆ ಗೊತ್ತಿಲ್ಲ. ನೀವು ಹೋಗಿ ನಿಮ್ಮ ತಾಯಿಯವರನ್ನು ಮಾತನಾಡಿಸಿದ್ರಾ ಎಂದರೆ ಸಾಕ್ಷಿಯು ಅವರು ಕಂಡರೆ ಅವರನ್ನು ಮಾತನಾಡಿಸುತ್ತೇನೆ ಈಗ ಹೋದರೆ ನಮ್ಮ ಸಹೋದರರು ನಮ್ಮ ಮೇಲೆ ಗಲಾಟೆ ಮಾಡುತ್ತಾರೆನ್ನುತ್ತಾರೆ. ನನ್ನ ತಂದೆ ತಾಯಿಗೆ ಗಂಡು ಸಂತಾನ ಇರುವುದಿಲ್ಲ ನಾನು ಮತ್ತು 2 ನೇ ಪ್ರತಿವಾದಿ ಮಾತ್ರ ಮಕ್ಕಳು ಇರುತ್ತೇವೆಂದು ನುಡಿಯುತ್ತಾರೆ. ಈಗಾಗಲೇ ನನ್ನ ತಂದೆಯವರು ನನಗೆ ಮತ್ತು ನನ್ನ ಸಹೋದರಿಗೆ ದಾನಪತ್ರದ ಮೂಲಕ ಆಸ್ತಿಯನ್ನು ಕೊಟ್ಟಿರುವುದರಿಂದ ಪುನಃ

ಭಾಗ ಕೇಳಲು ಬರುವುದಿಲ್ಲವೆಂದರೆ ಸರಿಯಲ್ಲ. ನಮ್ಮ ತಂದೆಯವರು 4 ನೇ ಪ್ರತಿವಾದಿಗೆ ಮಾರಾಟ ಮಾಡಿರುವ ಆಸ್ತಿಯಲ್ಲಿಯೂ ಸಹಾ ನನಗೆ ಯಾವುದೇ ಹಕ್ಕು ಇರುವುದಿಲ್ಲವೆಂದರೆ ಸರಿಯಲ್ಲ. 4 ನೇ ಪ್ರತಿವಾದಿಯು ನಮ್ಮ ತಂದೆಯಿಂದ ಖರೀದಿಸಿದ ಆಸ್ತಿಗೆ ಅವನೇ ಹಕ್ಕುದಾರನೆಂದರೆ ಸರಿಯಲ್ಲ. ನಮ್ಮ ವಿವಾಹಗಳನ್ನು ಮತ್ತು ಬಾಣಂತನ ಹಾಗೂ ಇತರೆ ಕಾರ್ಯಗಳನ್ನು ನಮ್ಮ ತಂದೆ ತಾಯಿಯವರೇ ಮಾಡಿದ್ದಾರೆಂದರೆ ಸರಿ. ನನ್ನ ತಂದೆ ತಾಯಿಯವರಿಗೆ ನಾವು ಅವರ ಮುಪ್ಪಿನಾವಸ್ಥೆಯಲ್ಲಿ ನೋಡಿಕೊಂಡಿರುವುದಿಲ್ಲವೆಂದರೆ ಸಾಕ್ಷಿಯು ಅವರು ನಮ್ಮ ಬಳಿ ಬಂದರೆ ನೋಡಿಕೊಳ್ಳುತ್ತೇವೆನ್ನುತ್ತಾರೆ. ನಮ್ಮ ತಂದೆಗೆ ಬಂದಿರುವ ಭಾಗ ನಮ್ಮ ತಾಯಿಗೆ ಸಂಬಂಧಿಸಿದ್ದು ಇರುತ್ತದೆ ಅದರಲ್ಲಿ ನಮಗೆ ಯಾವುದೇ ಹಕ್ಕು ಇರುವುದಿಲ್ಲವೆಂದರೆ ಸರಿಯಲ್ಲ. ನಮ್ಮ ತಂದೆ ತಾಯಿ ಮೇಲಿರುವ ದ್ವೇಷದಿಂದ ನಾನು ಅವರ ವಿರುದ್ಧ ಸುಳ್ಳು ದಾವೆಯನ್ನು ದಾಖಲಿಸಿ ನಾನು ಅದಕ್ಕನುಗುಣವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

(ಈ ಹಂತದಲ್ಲಿ 3 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ